**<u>ಸಾಕ್ಷಿಗೆ ದಿನಾಂಕ *15 -11-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ವಾದಿಯರ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ</u>**

ನನ್ನ ತಂದೆಯ ತಂದೆಯ ಹೆಸರು ಮರಿಬಸಪ್ಪ ಎಂದರೆ ಸರಿ. ಅವರು ಮೂಲತಃ ಅಮರಾವತಿ ಗ್ರಾಮದವರು ಎಂದರೆ ಸರಿ. ಮರಿಬಸಪ್ಪ ರವರಿಗೆ ದಾವಾದ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಅಮರಾವತಿ ಗ್ರಾಮದಲ್ಲಿ ಇರುತ್ತವೆ ಎಂದರೆ ಸರಿ. ನನ್ನ ಅಜ್ಜ ಮರಿಬಸಪ್ಪ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಮರಿಬಸಪ್ಪ ರವರಿಗೆ ಬೈಲಪ್ಪ ಮತ್ತು ಸಂಗನಬಸಪ್ಪ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. ಮರಿಬಸಪ್ಪ ತೀರಿಕೊಂಡ ನಂತರ ಅವರು ಬಿಟ್ಟುಹೋದಂತಹ ಆಸ್ತಿಗಳಿಗೆ ಅವರ ಇಬ್ಬರು ಮಕ್ಕಳು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಬೈಲಪ್ಪ ರವರ ಮಗ ಅಂಬರೇಶ ಮತ್ತು ಸಂಗನಬಸಪ್ಪ ರವರ ಮಗ ನಾನು ಇರುತ್ತೇವೆ.

ಚನ್ನಪ್ಪ ರವರ ತಂದೆಯ ಹೆಸರು ಬಸಪ್ಪ ಗೌಡ್ರ ಎಂದು ಇತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಬಸಪ್ಪ ಗೌಡ್ರ ಮತ್ತು ನನ್ನ ಅಜ್ಜ ಮರಿಬಸಪ್ಪ ಗೌಡ್ರ ಇಬ್ಬರು ಒಂದೇ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಅಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಚನ್ನಪ್ಪ ರವರ ಮಕ್ಕಳ ಪೈಕಿ ಬಸಪ್ಪ ಮತ್ತು ಸಂಗಪ್ಪ ಎಂದು ಇಬ್ಬರ ಮಕ್ಕಳು ಇರುತ್ತಾರೆ. ಬಸಪ್ಪ ರವರು 1987 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಬಸಪ್ಪ ರವರ ಹೆಂಡತಿ ರುದ್ರವ್ವ ಎಂದರೆ ಸರಿ. ಸಂಗಪ್ಪ ರವರ ಹೆಂಡತಿಯ ಹೆಸರು ಯಲ್ಲವ್ವ ಮತ್ತು ಮಗನ ಹೆಸರು ಬಸನಗೌಡ ಎಂದರೆ ಸರಿ. ಚನ್ನಪ್ಪ ರವರು ಜೀವಂತ ಇದ್ದಾಗ ಅವರ ಆಸ್ತಿಯ ದೇಖರಿಕೆಯನ್ನು ಅವರೇ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ವಾದಿಯರು ಯಾವ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ಮತ್ತು ಏನು ವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ನಾನು ಏನು ತಕರಾರು ಸಲ್ಲಿಸಿರುತ್ತೇನೆ ಎಂದು ತಿಳಿದುಕೊಂಡಿರುತ್ತೇನೆ.

ಅಮರಾವತಿ ಗ್ರಾಮದ ಸರ್ವೆ ನಂ.188 ಕ್ಷೇತ್ರ 16 ಎಕರೆ 2 ಗುಂಟೆ ಇದು ನನ್ನ ಅಜ್ಜ ಮರಿಬಸಪ್ಪ ರವರ ಮನೆತನಕ್ಕೆ ಸಂಬಂದಪಟ್ಟ ಆಸ್ತಿ ಅಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಇಂದು ಇಬ್ಬರು ಪ್ರತಿವಾದಿಯರ ಪರವಾಗಿ ಸಾಕ್ಷಿ

ಹೇಳುತ್ತಿದ್ದೇನೆ. ಸದರಿ ಆಸ್ತಿಯ ದಾಖಲಾತಿಯನ್ನು ನೋಡಿ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಆಸ್ತಿಯು ಮೂಲತಃ ಅಮರಾವತಿ ಗ್ರಾಮದ ದೇಸಾಯಿ ಎನ್ನುವವರಿಗೆ ಸೇರಿದ ಆಸ್ತಿ ಎಂದರೆ ಸರಿ. ನಾನು 1977 ರಲ್ಲಿ ಜನಿಸಿರುತ್ತೇನೆ. 1974 ಕ್ಕಿಂತ ಪೂರ್ವದಲ್ಲಿ ಸದರಿ ಆಸ್ತಿಯನ್ನು ಚನ್ನಪ್ಪ ತಂ.ಬಸಪ್ಪ ಗೌಡ್ರ ರವರು ಸಾಗುವಳಿ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಗೆ ಸಂಬಂದಪಟ್ಟಂತೆ ಚನ್ನಪ್ಪ ಬಸಪ್ಪ ಗೌಡ್ರ ರವರ ಹೆಸರು ಸಂರಕ್ಷಿತ ಕುಳ ಎಂದು ಇತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳಿದರು.ಸಾಕ್ಷಿದಾರರು ಮುಂದುವರೆದು ಚನ್ನಪ್ಪ ಬಸಪ್ಪ ಗೌಡ್ರ ಮತ್ತು ನನ್ನ ಅಜ್ಜ ಮರಿಬಸಪ್ಪ ಕೂಡಿ ಸಾಗುವಳಿ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿತ್ತು ಎಂದು ಹೇಳುತ್ತಾರೆ. ಚನ್ನಪ್ಪ ಬಸಪ್ಪ ಗೌಡ್ರ ರವರ ಹೆಸರು ಸಂರಕ್ಷಿತ ಕುಳ ಎಂದು ಹೇಗೆ ಇತ್ತೋ ಹಾಗೆ ನನ್ನ ಅಜ್ಜ ಮರಿಬಸಪ್ಪ ಅಥವಾ ಅವರ ಮಗ ಬೈಲಪ್ಪ ರವರ ಹೆಸರು ಸದರಿ ಆಸ್ತಿಯ ಉತಾರೆಯಲ್ಲಿ 1974 ಕ್ಕಿಂತ ಮೊದಲು ಇರಲಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1974 ಕ್ಕಿಂತ ಮೊದಲು ನನ್ನ ಅಜ್ಜ ಮರಿಬಸಪ್ಪ ಅಥವಾ ಬೈಲಪ್ಪ ರವರು ಚನ್ನಪ್ಪ ಬಸಪ್ಪ ಗೌಡ್ರ ರವರ ಜೊತೆ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿದಾರರು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಮತ್ತು ನಾನು ಹುಟ್ಟುವ ಪೂರ್ವದಲ್ಲಿ ಏನೇನು ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.

ನನ್ನ ಅಜ್ಜ ಮರಿಬಸಪ್ಪ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ಅಜ್ಜ ಮರಿಬಸಪ್ಪ ಆಗಲೀ ಅಥವಾ ಬೈಲಪ್ಪ ರವರಾಗಲೀ ಸದರಿ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದೇವೆ ಎಂದು ತಮಗೆ ಗೇಣಿ ಹಕ್ಕು ಕೊಡಿ ಎಂದು ಭೂ ನ್ಯಾಯ ಮಂಡಳಿ ಹುನಗುಂದ ರವರಿಗೆ ಫಾರ್ಮ ನಂ. 7 ನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಕೊಟ್ಟಿರಬಹುದು ಎಂದು ಹೇಳುತ್ತಾರೆ. ಈ ಕುರಿತು ಫಾರ್ಮ ನಂ.7 ಕೊಟ್ಟಿರುವ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿದಾರರು ಮನೆಯಲ್ಲಿ ಕೇಳಬೇಕು ಎಂದು ಹೇಳುತ್ತಾರೆ. ಈ ಕುರಿತು ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಭೂ ನ್ಯಾಯ ಮಂಡಳಿ ಹುನಗುಂದ ರವರಿಗೆ ಫಾರ್ಮ ನಂ. 7 ನ್ನು ಮರಿಬಸಪ್ಪ ಅಥವಾ ಬೈಲಪ್ಪ ಕೊಟ್ಟ ನಂತರ ಅವರು ಮಂಜೂರಿ ಮಾಡಿದ್ದಾರಾ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಕುರಿತು ಫಾರ್ಮ

ನಂ.10 ನ್ನು ಭೂನ್ಯಾಯ ಮಂಡಳಿಯವರು ಕೊಟ್ಟ ಬಗ್ಗೆ ಗೊತ್ತಿರುವುದಿಲ್ಲ.

ನಾನು ದ್ವಿತೀಯ ಪಿಯುಸಿ ಓದಿದ್ದು, ದಾಖಲೆಗಳ ಬಗ್ಗೆ ತಿಳಿದುಕೊಳ್ಳಲು ಬರುತ್ತದೆ.

ವಾದಿ ಪರ ವಕೀಲರು ಸಾಕ್ಷಿದಾರರಿಗೆ ನಿಪಿ-1 ನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ನೋಡಿ ಸರಿ ಎಂದು ಹೇಳುತ್ತಾರೆ. ಫಾರ್ಮ ನಂ.7 ನ್ನು ತುಂಬಿದ ನಂತರ ದಿನಾಂಕ 6-9-1975 ರಂದು ಸರ್ವೆ ನಂ. 188 ಕ್ಷೇತ್ರ 16 ಎಕರೆ 2 ಗುಂಟೆ ಇದನ್ನು ಚನ್ನಪ್ಪ ಬಸಪ್ಪ ಗೌಡರ ರವರಿಗೆ ಭೂನ್ಯಾಯ ಮಂಡಳಿ ಹುನಗುಂದ ರವರು ಮಂಜೂರಿ ಮಾಡಿರುತ್ತಾರೆ ಮತ್ತು ಈ ಕುರಿತು ನಿಪಿ-2 ಆಗಿರುತ್ತದೆ ಎಂದರೆ ಸರಿ. 1981 ರಲ್ಲಿ ಚನ್ನಪ್ಪ ಬಸಪ್ಪ ಗೌಡರ ರವರ ಹೆಸರಿನಲ್ಲಿ ಫಾರ್ಮ ನಂ.10 ನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಈ ಕುರಿತು ನಿಪಿ-3 ಎಂದು ದಾಖಲೆ ಇರುತ್ತದೆ. ನಿಪಿ-1 ರಿಂದ 3 ದಾಖಲೆಗಳನ್ನು ನೋಡಿದಾಗ ಸದರಿ ಆಸ್ತಿಯನ್ನು ಸರಕಾರದವರು ಚನ್ನಪ್ಪ ಬಸಪ್ಪ ಗೌಡ್ರ ರವರಿಗೆ ಕೊಟ್ಟಿರುವ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ಮಂಜೂರು ಮಾಡಿದ ನಂತರ 15 ವರ್ಷಗಳ ಕಾಲ ಪರಭಾರೆ ಮಾಡಬಾರದು ಎಂದು ಕಂಡಿಷನ್ ಹಾಕಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1975 ರಲ್ಲಿ ಭೂ ನ್ಯಾಯ ಮಂಡಳಿ, ಹುನಗುಂದ ರವರು ಮಾಡಿದ ಆದೇಶದ ಪ್ರಕಾರ ಚನ್ನಪ್ಪ ಬಸಪ್ಪ ಗೌಡ್ರ ರವರು ಮಾಲೀಕರಾಗಿ ಮತ್ತು ಕಬ್ಜಾದಾರರಾಗಿ ಉತಾರೆಯಲ್ಲಿ ಅವರ ಹೆಸರು ಬಂದಿರುತ್ತದೆ ಎಂದರೆ ಸಾಕ್ಷಿದಾರರು ಚನ್ನಪ್ಪ ಬಸಪ್ಪ ಗೌಡ್ರ ಮತ್ತು ನನ್ನ ತಂದೆಯ ಸಹೋದರ ಬೈಲಪ್ಪ ಇಬ್ಬರು ಸಾಗುವಳಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಚನ್ನಪ್ಪ ಬಸಪ್ಪ ಗೌಡ್ರ ರವರ ಜೊತೆ ಬೈಲಪ್ಪ ರವರು ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಚನ್ನಪ್ಪ ತೀರಿಕೊಂಡ ನಂತರ ಅವರು ಬಿಟ್ಟು ಹೋದ ಆಸ್ತಿಗಳಿಗೆ ರುದ್ರವ್ವ ಮತ್ತು ಸಂಗಪ್ಪ ರವರು ಹಕ್ಕುದಾರರು ಮತ್ತು ವಾರಸಾದಾರರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಚನ್ನಪ್ಪ ರವರು 1988 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ಶಾಲೆಯನ್ನು ಕಲಿತಿರುವುದಿಲ್ಲ ಎಂದರೆ ಸರಿಯಲ್ಲ. ಚನ್ನಪ್ಪ ರವರ ಮಗ ಬಸಪ್ಪನ ಹೆಂಡತಿಯಾದ ರುದ್ರವ್ವ ರವರಿಗೆ ಯಾವುದೇ ವ್ಯವಹಾರಿಕ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಚನ್ನಪ್ಪನ ಇನ್ನೊಬ್ಬ ಮಗ ಸಂಗಪ್ಪ ರವರಿಗೆ ಆದ್ಯಾತ್ಮಿಕದ ಕಡೆಗೆ ಒಲವು ಹೆಚ್ಚಾಗಿದ್ದರಿಂದ ಅವರು ಅಮರಾವತಿ ಗ್ರಾಮದಲ್ಲಿ ಇರದೇ ಬೇರೆ ಬೇರೆ ಊರುಗಳಲ್ಲಿ ಇರುತ್ತಿದ್ದರು ಎಂದರೆ ಸರಿ. ಈ ಹಂತದಲ್ಲಿ ವಾದಿಯ ಪರ ವಕೀಲರು ಸಾಕ್ಷಿದಾರರಿಗೆ ಸಂಗಪ್ಪ ರವರ ಆಧಾರ ಕಾರ್ಡನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ನೋಡಿ ಅವರನ್ನು ಗುರುತಿಸಿದ್ದರಿಂದ ನಿಪಿ-8

ಎಂದು ಗುರುತಿಸಲಾಯಿತು. ಸಂಗಪ್ಪ ರವರು ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದುದರಿಂದ ಸಂಗಪ್ಪನ ಹೆಂಡತಿ ಯಲ್ಲಮ್ಮ ಮತ್ತು ಮಗ ಬಸನಗೌಡ ರವರು ಅಮರಾವತಿ ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ . ಇಂದು ಮಾನ್ಯ ನ್ಯಾಯಾಲಯದಲ್ಲಿ ಕುಳಿತಿದ್ದ ವ್ಯಕ್ತಿಯನ್ನು ತೋರಿಸಿ ಸಂಗಪ್ಪರವರ ಮಗ ಬಸನಗೌಡ ಎಂದು ಹೇಳಿದಾಗ ಸಾಕ್ಷಿದಾರರು ಅವನನ್ನು ನೋಡಿ ಹೌದು ಎಂದು ಹೇಳಿರುತ್ತಾರೆ. 2009 ರಿಂದ ಇವತ್ತಿನವರೆಗೆ ಸಂಗಪ್ಪ ರವರ ಹೆಂಡತಿ ಮತ್ತು ಮಗ ಅಮರಾವತಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 2015 ರಲ್ಲಿ ಜಮೀನು ಸರ್ವೆ ನಂ. 188 ರ ಸಲುವಾಗಿ ತಕರಾರು ಆಗಿರುತ್ತದೆ ಎಂದರೆ ಸರಿ. ಆಗ ನಾವು ರುದ್ರವ್ವ ಮತ್ತು ಯಲ್ಲಮ್ಮ ರವರಿಗೆ ಚನ್ನಪ್ಪ ರವರು 8 ಎಕರೆ ಆಸ್ತಿಯನ್ನು ವಾಟ್ನಿ ತರೀಖ ಬಿಟ್ಟುಕೊಟ್ಟಿದ್ದಾರೆ ಎಂದು ನಾವು ಹೇಳಿದ್ದೇವು. ನಂತರ ಅವರು ದಾಖಲೆಗಳನ್ನು ತೆಗೆಸಿ ನೋಡಿದಾಗ 8 ಎಕರೆಗೆ ಸಂಬಂದಪಟ್ಟಂತೆ ನನ್ನ ಹೆಸರು ಎಂಟ್ರಿ ಆಗಿದ್ದರಿಂದ ಕೆಳಗಿನ ನ್ಯಾಯಾಲಯದಲ್ಲಿ ವಾದಿಯರು ದಾವಾ ಸಲ್ಲಿಸಿದ್ದರು ಎಂದರೆ ಸರಿ. ಇದಕ್ಕೆ ಸಂಬಂದಪಟ್ಟಂತೆ 2019 ರಲ್ಲಿ ನಮ್ಮ ಮತ್ತು ಅವರ ನಡುವೆ ನ್ಯಾಯ ಆಗಿರುತ್ತದೆ. 2019 ರಲ್ಲಿ ನಾವು ದಬ್ಬಾಳಿಕೆ ಮಾಡಿ ಅವರ ಕಬ್ಜಾವನ್ನು ಬಿಡಿಸಿ ನಾವು ಕಬ್ಜಾದಲ್ಲಿ ಬಂದಿರುತ್ತೇವೆ ಎಂದರೆ ಸಾಕ್ಷಿದಾರರು ಮೊದಲಿನಿಂದಲೂ ನಾವು ಕಬ್ಜಾದಲ್ಲಿ ಇರುತ್ತೇವೆ ಎಂದು ಹೇಳುತ್ತಾರೆ. ಉಳಿದ 8 ಎಕರೆ ಆಸ್ತಿಯಲ್ಲಿ ಇವತ್ತಿನವರೆಗೂ ವಾದಿಯರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. 2019 ರಲ್ಲಿ ನಾವು ಅವರ ಕಬ್ಜಾ ತಪ್ಪಿಸಿದ ನಂತರ ಅವರು ತಮಗೆ ಕಬ್ಜಾ ಬೇಕೆಂದು ಮಾಗಣಿ ಮಾಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ